# ಹಸ್ತಿ ಕನ್ಯೆ!



■ ಪ್ರವೀಣ ಕುಲಕರ್ಣಿ

'ಆನೆ ನಡೆದದ್ದೇ ದಾರಿ' ಎನ್ನುವ ಮಾತು ಕೇಳಿದ್ದೀರಲ್ಲ? ಅಂತಹ ಆನೆಗಳಿಗೇ ದಾರಿ ತೋರಬಲ್ಲ ಭಾರತದ ಮೊದಲ ಮಹಿಳಾ ಮಾವುತರು ಇವರು. ಹೀಗಾಗಿ 'ಹಸ್ತಿ ಕನ್ಯೆ' ಎಂದೇ ಹೆಸರಾದವರು. ಗಜಪಡೆಗಳು ಹಿಂಡು ಹಿಂಡಾಗಿ ಓಡಾಡುವ ಪರಿಸರದಲ್ಲೇ ಹುಟ್ಟಿ, ಬೆಳೆದ ಅವರಿಗೆ ಆನೆಗಳೆಂದರೆ ಅವರ ಪರಿವಾರದ ಸದಸ್ಯರಿದ್ದಂತೆ. ಅವರು ಅಸ್ಸಾಂನ ಗೌರಿಪುರದ ರಾಜಮನೆತನಕ್ಕೆ ಸೇರಿದ ಮಗಳೂ ಹೌದು. ತಮ್ಮ ಹದಿನಾಲ್ಕನೇ ವಯಸ್ಸಿನಲ್ಲಿಯೇ ಆನೆಯನ್ನು ಪಳಗಿಸಿದ್ದ ಈ ದಿಟ್ಟೆ ಬೇರೆ ಯಾರೂ ಅಲ್ಲ, ಪಾರ್ವತಿ ಬರುವಾ.

ಪಾರ್ವತಿ ಅವರನ್ನು ನೋಡಿದರೆ ಇವರೇನು ಕಾಡಿನ ದೈತ್ಯ ಆನೆಗಳನ್ನು ಪಳಗಿಸುತ್ತಾರೆ ಎಂಬ ಪ್ರಶ್ನೆ ತಟ್ಟನೆ ಮೂಡುತ್ತದೆ. ಅಂತಹ ಕೃಶಕಾಯದ ವಾಮನಮೂರ್ತಿ ಅವರು. ಆನೆಗಳನ್ನು ಸೆರೆ ಹಿಡಿಯಲು ಬೇಕಾಗಿರುವುದು ಕೌಶಲವೇ ಹೊರತು ಬಲವಲ್ಲ. ಆನೆಗಳ ಮನಸ್ಸನ್ನು ಸರಿಯಾಗಿ ಗ್ರಹಿಸಿ, ಅವುಗಳನ್ನು ಪಳಗಿಸಬೇಕು. ಅದಕ್ಕೆ ಜಾಣ್ಮೆ ಬೇಕು. ಹಾಗೆ ಆನೆ ಪಳಗಿಸುವ ಕೆಲಸವೆಂದರೆ ನನಗೆ ಪಂಚಪ್ರಾಣ ಎಂದು ಅವರು ಹೇಳುತ್ತಾರೆ.

ಭಾರತದ ವನ್ಯಜೀವಿ ಸಂರಕ್ಷಣೆ ಕುರಿತ ಮಾತು ಎಲ್ಲಿಯೇ ಬರಲಿ, ಅಲ್ಲಿ ಪಾರ್ವತಿ ಅವರ ಉಲ್ಲೇಖ ಇದ್ದೇ ಇರುತ್ತದೆ. ಆನೆಗಳ ಸಂರಕ್ಷಣೆಯಲ್ಲಿ ಅವರು ಮಾಡಿದ ಕೆಲಸವೇ ಹಾಗಿದೆ. ತಮ್ಮ ಜೀವನವನ್ನೇ ಆನೆಗಳ ಸಂರಕ್ಷಣೆಗಾಗಿ ಸಮರ್ಪಿಸಿದವರು ಅವರು. ಅಸ್ಸಾಂ ಎಂದರೆ ಹೇಳಿ–ಕೇಳಿ ಆನೆಗಳ ಬೀಡು. ಅಂತಹ ಗಜಪಡೆಗಳ ಒಂದು ತಾಣ ಗೌರಿಪುರ. ಅಲ್ಲಿನ ರಾಜನಾಗಿದ್ದವರು ಪ್ರಕೃತೀಶ ಚಂದ್ರ ಬರುವಾ. 'ಭಾರತದ ಆನೆತಜ್ಞ' ಎಂದೇ ಅವರು ಖ್ಯಾತರಾದವರು. ಪ್ರಕೃತೀಶ ಚಂದ್ರ ಅವರ ಒಂಬತ್ತು ಮಕ್ಕಳಲ್ಲಿ ಪಾರ್ವತಿ ಕೂಡಾ ಒಬ್ಬರು. ಬಾಲ್ಯದಲ್ಲಿ ಪಾರ್ವತಿ ಅವರು ಇತರ ಮಕ್ಕಳಂತೆ ಗೊಂಬೆಗಳ ಜೊತೆ ಆಡಲಿಲ್ಲ. ಬದಲಾಗಿ ತಂದೆಯೊಂದಿಗೆ ಅರಣ್ಯ ಸುತ್ತುತ್ತಾ ಆನೆಗಳ ಲೋಕದಲ್ಲಿ ವಿಹರಿಸುತ್ತಾ ಸಾಗಿದರು. ಹಾಗೆ ಶುರುವಾದ ಪಾರ್ವತಿ ಅವರ 'ಜಂಬೂ ಸವಾರಿ' ಐದು ದಶಕಗಳ ಬಳಿಕವೂ ನಿರಾತಂಕವಾಗಿ ಮುಂದುವರಿದಿದೆ.

ಪಾರ್ವತಿ ಅವರು ಮೊದಲ ಬಾರಿಗೆ ಕಾಚುಗಾಂವ್ ಅರಣ್ಯದಲ್ಲಿ ಆನೆಯೊಂದನ್ನು ಸೆರೆ ಹಿಡಿದು, ಪಳಗಿಸಿದಾಗ ಅವರಿಗೆ ಕೇವಲ ಹದಿನಾಲ್ಕು ವರ್ಷ. ಹೆಣ್ಣು ಮಕ್ಕಳ ಇಂತಹ ಸಾಹಸಗಳಿಗೆ ಸಮಾಜ ಪ್ರೋತ್ಸಾಹ ನೀಡುವುದಿಲ್ಲವಾದರೂ ಪಾರ್ವತಿ ಅವರ ತಂದೆ ಅವರ ಬೆಂಬಲಕ್ಕೆ ನಿಂತರು. ಮಾವುತಳಾಗಿ ತರಬೇತಿ ಹೊಂದುತ್ತಾ ಸಾಗಿದ ಅವರು, 1972ರಲ್ಲಿ ಅಧಿಕೃತವಾಗಿ ಮಾವುತಳಾಗಿ ಗುರ್ತಿಸಿಕೊಂಡರು. ಪುರುಷ ಪ್ರಧಾನವಾಗಿದ್ದ ವೃತ್ತಿಯಲ್ಲಿ ಮೊದಲ ಬಾರಿಗೆ ಮಹಿಳೆಯ ಹೆಜ್ಜೆಗುರುತುಗಳನ್ನು ಮೂಡಿಸಿದರು.

ಆನೆಗಳ ಸಂರಕ್ಷಣೆ, ಪಳಗಿಸುವಿಕೆ ಹಾಗೂ ಆನೆ–ಮಾನವ ಸಂಘರ್ಷ ತಪ್ಪಿಸಲು ನಿರಂತರವಾಗಿ ಪ್ರಯತ್ನಿಸುತ್ತಾ ಬಂದಿರುವ ಅವರು, ಇದುವರೆಗೆ 500 ಆನೆಗಳನ್ನು ಪಳಗಿಸಿದ್ದಾರೆ. ಆನೆಗಳನ್ನು ಖೆಡ್ಡಾಕ್ಕೆ ಬೀಳುವಂತೆ ಮಾಡದೆ, ಯಾವುದೇ ಹಿಂಸೆ ಆಗದಂತೆ ನೋಡಿಕೊಂಡು ಅವುಗಳನ್ನು ಸೆರೆ ಹಿಡಿದಿರುವುದು ಅವರ ಹೆಚ್ಚುಗಾರಿಕೆ. ಅಸ್ಸಾಂನ ಸಾಂಪ್ರದಾಯಿಕ 'ಮೇಳಾ ಶಿಕಾರ್' ವಿಧಾನದ ಮೂಲಕ ಆನೆಗಳನ್ನು ಪಳಗಿಸಿದವರು ಅವರು. ಅಸ್ಸಾಂ ಮಾತ್ರವಲ್ಲದೆ, ಪಶ್ಚಿಮ ಬಂಗಾಳ ಮತ್ತು ಒಡಿಶಾದಲ್ಲೂ ಮಾನವ–ಪ್ರಾಣಿ ಸಂಘರ್ಷವನ್ನು ತಪ್ಪಿಸಿದವರು.

ಬಿಬಿಸಿಯು ಪಾರ್ವತಿ ಅವರ ಜೀವನದ ಕುರಿತು 'ಕ್ವೀನ್ ಆಫ್ ದಿ ಎಲಿಫೆಂಟ್ಸ್' ಎಂಬ ಸಾಕ್ಷ್ಯಚಿತ್ರವನ್ನು ನಿರ್ಮಾಣ ಮಾಡಿದೆ. ಭಾರತ ಸರ್ಕಾರದ ಪದ್ಮಶ್ರೀ, ವಿಶ್ವಸಂಸ್ಥೆಯ ಗ್ಲೋಬಲ್ 500 ರೋಲ್ ಆಫ್ ಆನರ್ ಪ್ರಶಸ್ತಿಗಳು ಸಂದಿವೆ. ಆನೆಯ ಒಂದು ಸಣ್ಣ ಕದಲಿಕೆ, ಅದರ ಒಂದು ಸಣ್ಣ ಘೇಂಕಾರ, ಕಣ್ಣಲ್ಲಿ ಜಿನುಗುವ ಹನಿಯ ಹಿಂದಿನ ಕಾರಣ ಹಾಗೂ ಅವುಗಳ ಭಾವನೆಯನ್ನು ಪಾರ್ವತಿ ಅವರು ಕರಾರುವಾಕ್ಕಾಗಿ ಗುರ್ತಿಸಿಬಿಡುತ್ತಾರೆ. 'ಆನೆಗಳ ಭಾವನೆಯನ್ನು ನಾನು ಅರ್ಥ ಮಾಡಿಕೊಳ್ಳುವುದರಿಂದ ಅವುಗಳು ನನ್ನನ್ನು ಪ್ರೀತಿಸುತ್ತವೆ' ಎಂದು ಅವರು ಹೇಳುತ್ತಾರೆ.

ಪಾರ್ವತಿ ಅವರು ತಮ್ಮ ಮೂರು ಆನೆಗಳನ್ನು– ಲಕ್ಷ್ಮಿಮಾಲಾ, ಅಲೋಕ ಮತ್ತು ಕಾಂಚನಮಾಲಾ– ತಮ್ಮ ಮೂವರು ಪುತ್ರಿಯರಂತೆ ಭಾವಿಸಿ, ಅವುಗಳ ಪಾಲನೆ ಮಾಡುತ್ತಾರೆ. ಪ್ರತಿದಿನ ಆನೆಗಳಿಗೆ ಸ್ನಾನ ಮಾಡಿಸುವುದು, ಕಾಡಿಗೆ ಕರೆದುಕೊಂಡು ಹೋಗಿ ಬರುವುದು ಮತ್ತು ಅವುಗಳಿಗೆ ಇಷ್ಟವಾದ ಆಹಾರ ಸಿದ್ಧಪಡಿಸಿ ತಿನ್ನಿಸುವುದು ಅವರ ದಿನಚರಿ. ಪಾರ್ವತಿ ಅವರೇನೂ ವಿವಾದದಿಂದ ಹೊರತಾದವರಲ್ಲ. 2003ರಲ್ಲಿ ಛತ್ತೀಸಗಢದಲ್ಲಿ ಅವರು ಸೆರೆ ಹಿಡಿದ ಆನೆಯೊಂದಕ್ಕೆ ಚಿತ್ರಹಿಂಸೆ ನೀಡಲಾಗಿದೆ ಎಂದು ವಿಡಿಯೊ ದೃಶ್ಯಗಳನ್ನು ಸೆರೆಹಿಡಿದು ಹಂಚಿಕೊಳ್ಳಲಾಗಿತ್ತು. ಪುಂಡ ಮರಿಯಾನೆಯೊಂದನ್ನು ಪಳಗಿಸಲು ಹೋಗಿದ್ದ ಪಾರ್ವತಿ ವಿವಾದಕ್ಕೆ ಸಿಲುಕಿಕೊಂಡಿದ್ದರು. 'ಛತ್ತೀಸಗಢ ಸರ್ಕಾರವು ಅದನ್ನು ಮದಿಸಿದ ಆನೆ ಎಂದು ಘೋಷಿಸಿತ್ತು. ಅಂತಹ ಆನೆಗಳನ್ನು ಹಗ್ಗದಿಂದ ಬಂಧಿಸಿಡುವುದು ಅನಿವಾರ್ಯ. ಇಲ್ಲದಿದ್ದರೆ ಅವುಗಳು ಜನರನ್ನು ಕೊಂದು ಹಾಕುತ್ತವೆ. ಹಾಗೆ ಬಂಧಿಸಿಟ್ಟ ಪ್ರಸಂಗವನ್ನೇ ಸೆರೆ ಹಿಡಿದು ತೋರಿಸಿ ವಿವಾದ ಸೃಷ್ಟಿಸಲಾಯಿತು' ಎಂದವರು ವಿವರಿಸುತ್ತಾರೆ.

ಯಾರು ಏನೇ ಹೇಳಲಿ, ಪಾರ್ವತಿ ಅವರ ಆನೆ ಪ್ರೀತಿಯಂತೂ ಪ್ರಶ್ನಾತೀತವಾಗಿದೆ. ಈ ಇಳಿವಯಸ್ಸಿನಲ್ಲೂ ಆನೆಗಳ ಸೇವೆಯೇ ತಮ್ಮ ಬದುಕಿನ ಏಕಮಾತ್ರ ಗುರಿ ಎಂದು ನಂಬಿ, ಅವುಗಳ ಸಹವಾಸದಲ್ಲೇ ಕಾಲ ಕಳೆಯುತ್ತಿದ್ದಾರೆ.

ಆನೆಗಳು ಹರ್ಷಿಸಿದರೆ ತಾವೂ ಹರ್ಷಿಸುತ್ತಾರೆ. ಅವುಗಳು ಅತ್ತರೆ ತಾವೂ ಕಣ್ಣೀರು ಹಾಕುತ್ತಾರೆ, ಈ ಹಸ್ತಿಕನ್ಯೆ! ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65